**ಓ ಎಸ್ ನಂಃ 85/2023** **ಪಿ ಡಬ್ಲೂಃ1 ಶ್ರೀಮತಿ ಮಂಜುಳಾ**

ದಿನಾಂಕಃ 03/01/2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಬಿ ಪಿ ಪಿ ವಕೀಲರಿಂದಃ

1. (ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರ ಮೂಲಕ ಸಲ್ಲಿಸಿರುತ್ತಾರೆ.) ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದ ವಿಚಾರಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ, ಬರೆಸಿ ಓದಿಸಿ, ಕೇಳಿ ತಿಳಿದುಕೊಂಡಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ.

2. ದಾವಾ ಆಸ್ತಿಗೆ ಸಂಬಂಧಿಸಿದ ಎಂಟು ಉತಾರಗಳನ್ನು ಹಾಜರು ಮಾಡಿದ್ದು, ಅವನ್ನು ಗುರುತಿಸುತ್ತೇನೆ.(ಸಾಕ್ಷಿ ಗುರುತಿಸಿದ ಉತಾರಗಳನ್ನು ನಿಪಿಃ1 ರಿಂದ 8 ಎಂದು ಗುರುತಿಸಲಾಯಿತು) ಎಮ್ ಆರ್ ಹಾಜರು ಮಾಡಿ ಅದನ್ನು ಗುರುತಿಸುತ್ತೇನೆ.(ಸಾಕ್ಷಿ ಗುರುತಿಸಿದ ಎಮ್ ಆರ್ ನಿಪಿ. 9 ಎಂದು ಗುರುತಿಸಲಾಯಿತು) ಅಸಲು ದಾವೆ ನಂಬರ 66/2022 ರ ಧೃಡೀಕೃತ ರಾಜಿ ಪತ್ರ ಮತ್ತು ಡಿಕ್ರಿ ಹಾಜರು ಮಾಡಿ, ಅವನ್ನು ಗುರುತಿಸುತ್ತೇನೆ. (ಸಾಕ್ಷಿ ಗುರುತಿಸಿದ ರಾಜಿ ಪತ್ರ ಮತ್ತು ಡಿಕ್ರಿಯನ್ನು ನಿಪಿಃ10 ಮತ್ತು 11 ಎಂದು ಗುರುತಿಸಲಾಯಿತು) ಹಿರೇನರ್ತಿ ಗ್ರಾಮ ಪಂಚಾಯತಿ ಅವರಿಗೆ ನೀಡಿದ ಅರ್ಜಿ ಹಾಜರು ಮಾಡಿ, ಅದನ್ನು ಗುರುತಿಸುತ್ತೇನೆ.(ಸಾಕ್ಷಿ ಗುರುತಿಸಿದ ಅರ್ಜಿಯನ್ನು ನಿಪಿಃ12 ಎಂದು ಗುರುತಿಸಲಾಯಿತು) ಅಸಲು ದಾವೆ ನಂಬರ 66/2022 ರ ಧೃಡೀಕೃತ ವಾದ ಪತ್ರ ಹಾಜರು ಮಾಡಿದ್ದು, ಅದನ್ನು ಗುರುತಿಸುತ್ತೇನೆ.(ಸಾಕ್ಷಿ ಗುರುತಿಸಿದ ವಾದ ಪತ್ರವನ್ನು ನಿಪಿಃ13 ಎಂದು ಗುರುತಿಸಲಾಯಿತು) ಮತ್ತೊಂದು ಪಹಣಿ ಹಾಜರು ಮಾಡಿದ್ದು, ಅದನ್ನು ಗುರುತಿಸುತ್ತೇನೆ. (ಸಾಕ್ಷಿ ಗುರುತಿಸಿದ ಪಹಣಿಯನ್ನು ನಿಪಿಃ14 ಎಂದು ಗುರುತಿಸಲಾಯಿತು)

ಪಾಟೀ ಸವಾಲು ಃ (ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತುಲೇಖನಕ್ಕೆ ದಿಃ03-01-2024 ರಂದು ಬೆಳಿಗ್ಗೆ 11ಃ51 ರಿಂದ 11ಃ58 ಗಂಟೆಯವರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ
ಸಹಿ ಆಗಿದೆ
ಹಿರಿಯ ದಿವಾಣಿ ನ್ಯಾಯಾಧೀಶರು,
ಕುಂದಗೋಳ